ಹೆದ್ದಾರಿ ಕಾಣಿಸಿತ್ತು. ಲಾರಿ ಚಕ್ರಕ್ಕೇ ತಲೆಕೊಡ್ಡುವುದೆಂದು ತೀರ್ಮಾನಿಸಿ ಹೆದ್ದಾರಿಯ ಹಾದಿ ಹಿಡಿದಿದ್ದಳು.

ಅಮ್ಮನ ನೆನಪಾಯಿತು. 'ನಮ್ಮ ಬಡತನ ಇದ್ದದ್ದೇ. ನಾನು ಹುಟ್ಟುವಾಗಲೂ ಹೀಗೆಯೇ, ನೀನು ಹುಟ್ಟುವಾಗಲೂ ಹೀಗೆಯೇ. ಒಂದು ಮಾತು ನೆನಪಿನಲ್ಲಿಟ್ಟುಕೋ... ಮದುವೆ, ಗಂಡ ಎಲ್ಲ ಸರಿ. ಬಡವರಲ್ಲಿ ಮಕ್ಕಳನ್ನು ಸಾಕುವ ಜವಾಬ್ದಾರಿ ಯಾವಾಗಲೂ ತಾಯಿಯ ಮೇಲೆ. ಕೈಲಿದ್ರೆ ಗಂಡ ಕೊಟ್ಟಾನು. ಇಲ್ಲದಿದ್ದರೆ ಆತ ಕೈಚೆಲ್ಲಿ ಕುಳಿತುಕೊಳ್ಳುತ್ತಾನೆ. ಇದ್ದರೂ, ಇಲ್ಲದಿದ್ದರೂ ಹಸಿದ ಮಕ್ಕಳಿಗೆ ಆಹಾರ ಕೊಡುವ ಜವಾಬ್ದಾರಿ ತಾಯಿಗೆ. ಇದನ್ನು ಅರ್ಥ ಮಾಡಿಕೋ. ನಿನಗೆ ಸಾಕುವ ತಾಕತ್ತು ಇರುವಷ್ಟು ಮಕ್ಕಳನ್ನು ಮಾತ್ರ ಹೆರು. ಗಂಡ, ಗಂಡನ ಮನೆಯವರು, ಹೆತ್ತವರು, ಅಣ್ಣ, ತಮ್ಮ, ಇತರ ಸಂಸಾರದವರನ್ನೆಲ್ಲ ನಂಬಿಕೊಂಡು ಮಕ್ಕಳನ್ನು ಹೆರಲು ಹೋಗಬಾರದು. ಪರಿಸ್ಥಿತಿ ಕೆಟ್ಟು ನಂಬಿದ ಇತರರು ಕೈಕೊಟ್ಟು ಜಾರಿಕೊಂಡರು ಅಂತ ಇಟ್ಟುಕೋ... ನಿನಗೆ ಸಾಕಲು ಸಾಧ್ಯವಿದೆಯೇ? ಮಕ್ಕಳನ್ನು ನಿನಗೆ ದೇವಸ್ಥಾನದಲ್ಲಿ ಬಿಟ್ಟು ಬರಲಿಕ್ಕಾಗುತ್ತದೆಯೇ? ಮಗು ತಾಯಿಯ ಹೊಣೆ, ಹೆತ್ತ ಮಗುವಿಗೆ ಎರಡೊತ್ತು ಊಟ, ಬಟ್ಟೆ ಕೊಡಿಸಲು ನಿನಗೇ ಸಾಧ್ಯವಾಗಬೇಕು. ಇದನ್ನು ನೆನಪಲ್ಲಿಟ್ಟುಕೋ' ಅಂದಿದ್ದಳು. ಅದೆಲ್ಲ ಸಾಧ್ಯವಿರುವ ಮಾತುಗಳೇ? ಸಂಪಾದನೆ ಒಳ್ಳೆಯದಿದ್ದ ದಿನದಲ್ಲಿ ಚಿಕನ್ ಬಿರಿಯಾನಿ, ಮಟನ್ ಬಿರಿಯಾನಿ ಕಟ್ಟಿಸಿಕೊಂಡು ಬಂದು ಪ್ರೀತಿ ತೋರಿದ ಗಂಡ ಬಂದು ಜೊತೆಯಲ್ಲಿ ಮಲಗಿ ರಮಿಸಿದಾಗ ಇಲ್ಲ ಅನ್ನಲಾಗುತ್ತದೆಯೇ? ದೂರುವವರು ಅದಕ್ಕೂ ಹೆಣ್ಮಕ್ಕಳನ್ನೇ ದೂರುವುದು. ಇದರಲ್ಲಿ ತಾನು ತಪ್ಪು ಒಪ್ಪಿಕೊಳ್ಳುವುದಿಲ್ಲ. ಆದರೂ ಮದುವೆಯ ಮೊದಲ ಆರು ವರ್ಷಗಳಲ್ಲಿ ಮೂರು ಹೆರಬಾರದಿತ್ತು. ಈಗ ಹೇಳಿ ಏನು ಪ್ರಯೋಜನ? ಕೆಲಸ ಹುಡುಕಿಕೊಂಡು ಹೋಗಿ ಹಿಂದಿರುಗದವನಿಗೆ ಇದು ನಿನ್ನ ಸಂಸಾರ, ನಿನ್ನ ಜವಾಬ್ದಾರಿ ಅಂತ ಏನು ಹೇಳುವುದು? ಅವನಂಥವರಿಗೆ ದೊಡ್ಡ ಚಿಂತೆ ಏನೂ ಇಲ್ಲ. ಹೆಂಡತಿ, ಮಕ್ಕಳು ಇದ್ದರೆ ಇದ್ದಾರೆ, ಇಲ್ಲವಾದರೆ ಇಲ್ಲ. ಹೆಂಡತಿ ಸತ್ತರೆ ನಮ್ಮಲ್ಲಿ ಹುಡುಗಿಯರಿಗೇನು ಬರವೆ! ಬೇಕೆನಿಸಿದಾಗ ಇನ್ನೊಬ್ಬಳು ಸಿಗುತ್ತಾಳೆ. ಪುನಃ ಮಕ್ಕಳಾಗುತ್ತವೆ. ಅಂತಹ ಸೌಕರ್ಯ ಇರುವಾಗ ಗಂಡಸರೇಕೆ ತಲೆಕೆಡಿಸಿಕೊಳ್ಳುತ್ತಾರೆ? ತಲೆಯಲ್ಲಿ ಈ ಎಲ್ಲ ಯೋಚನೆಗಳು ಬರುವಾಗಲೂ ಆಕೆ ನಡೆಯುತ್ತಲೇ ಇದ್ದಳು.

ಅಷ್ಟರಲ್ಲಿ ದೂರದಿಂದ ಕೆಂಪು ಲಾರಿಯೊಂದು ಬರುವುದು ಕಾಣಿಸಿತು. ಖಾಲಿ ರಸ್ತೆಯಾಗಿದ್ದುದರಿಂದ ಹಗ್ಗಬಿಚ್ಚಿದ ದೈತ್ಯ ಗೂಳಿಯಂತೆ ಆರ್ಭಟಕೊಡುತ್ತ ವೇಗವಾಗಿ ಬರುತ್ತಿರುವ ಲಾರಿಯನ್ನು ಕಂಡೊಡನೆ ರುದ್ರಿಗೆ ಸಂತೋಷವಾಯಿತು. ಇದರ ಚಕ್ರದಡಿಗೆ ಸಿಕ್ಕಿದರೆ ಅಪ್ಪಚ್ಚಿಯಾಗಿ ಹೋಗುವುದು ಖಂಡಿತ. ಹುಟ್ಟಿಸಿದ ದೇವರಿಗೂ ತನ್ನ ಸಾವನ್ನು ತಪ್ಪಿಸಲು ಸಾಧ್ಯವಿಲ್ಲ. ಸಾಯಲು ಬಂದವಳು ಎಂದು ಚಾಲಕನಿಗೆ ಗೊತ್ತಾಗಬಾರದು. ಲಾರಿ ಹತ್ತಿರ ಬರುವಾಗ ಒಮ್ಮೆಲೆ ರಸ್ತೆ ನಡುವಿಗೆ ಹೋಗಿಬಿಡಬೇಕು. ನಾಲ್ಕು ಚಕ್ರದಲ್ಲಿ ಯಾವುದಾದರೂ ಸರಿಯೇ, ಬರೇ ಲಾರಿಯ ಬಾಡಿ ಗುದ್ದಿದರೂ ಸಾಕು. ಅರೆಕ್ಷಣದಲ್ಲಿ ಎಲ್ಲ ಸಮಸ್ಯೆಗಳಿಗೂ ಶಾಶ್ವತ ಮುಕ್ತಾಯ.

ಲಾರಿ ಇನ್ನೇನು ಹತ್ತಿರ ಬಂದೇಬಿಟ್ಟಿತು ಅನ್ನುವಾಗ ಕಣ್ಮುಚ್ಚಿ ಎರಡು ಹೆಜ್ಜೆ ರಸ್ತೆಯ ನಡುವಿಗೆ ಹಾಕಿದ್ದಳಷ್ಟೆ. ಒಮ್ಮೆಲೆ ಭಯವಾಯಿತು. ಮುಂದೆ ಹೆಜ್ಜೆ ಇಡಲಾಗಲಿಲ್ಲ. ಅದೇ ಕ್ಷಣಕ್ಕೆ ಚಾಲಕನೂ ಲಾರಿಯನ್ನು ಬ್ರೇಕು ಹಾಕಿ ಪಕ್ಕಕ್ಕೆ ಸರಿಸಿದಾಗ ಲಾರಿ ಇಂಚುಗಳ ಅಂತರದಲ್ಲಿ